

ಬದುಕನ್ನು ಕಟ್ಟಿಕೊಳ್ಳಲು ಸಾಧ್ಯ ಎಂಬುದನ್ನು ತಿಳಿಸಬೇಕಿದೆ. ಈಗ ಮಕ್ಕಳು ಕೇಳಿದ್ದೆಲ್ಲಾ ಕೈಗೆ ಸಿಗುತ್ತಿರುವಾಗ, ಪೋಷಕರ ಪ್ರೀತಿಯೂ ಕೂಡ ಮಕ್ಕಳ ಮೇಲೆ ಸ್ವಲ್ಪ ಜಾಸ್ತಿಯೇನೋ ಎನಿಸುವಷ್ಟು ಸಿಗುತ್ತಿರುವಾಗ, ಮಕ್ಕಳಿಗೆ ಇಲ್ಲದಿರುವುದರ, ಸಿಗದಿರುವುದರ ಮಹತ್ವ ತಿಳಿಯುತ್ತಿಲ್ಲ. ಕಲ್ಲುಮುಳ್ಳಿನ ಕಷ್ಟದ ಹಾದಿಯಲ್ಲಿ ಸಾಗಿಬಂದ ಪೋಷಕರು, ತಮ್ಮ ಮಕ್ಕಳು ಮಾತ್ರ ತಮ್ಮಂತೆ ಕಷ್ಟಪಡದಿರಲಿ ಎಂದು ಅವರಿಗಾಗಿ ಹೂವಿನ ಹಾದಿಯನ್ನು ಸಿದ್ಧಪಡಿಸಲು ತಮ್ಮ ಜೀವನವನ್ನೇ ತೇಯುತ್ತಾರೆ. ಇದ್ಯಾವುದರ ಅರಿವಿರದ ಮಕ್ಕಳು ಈಗ ‘ಸಾಕು’ ಎನ್ನುವುದನ್ನು ಮರೆತು ಬರೀ ‘ಬೇಕು’ಗಳ ಪಟ್ಟಿಯನ್ನೇ ಇಟ್ಟುಕೊಂಡಿರುತ್ತಾರೆ.

ಹೌದು, ಕಾಲಘಟ್ಟ ಬದಲಾಗಿದೆ. ತಂದೆ ಮತ್ತು ಮಕ್ಕಳ ಸಂಬಂಧ ಬದಲಾಗಿದೆ. ಆಗೆಲ್ಲಾ ತಂದೆಯ ಪ್ರೀತಿ ಗುಪ್ತಗಾಮಿನಿಯಾಗಿತ್ತೇ ಹೊರತು ಹೆಚ್ಚಿಗೆ ವ್ಯಕ್ತವಾಗುತ್ತಿರಲಿಲ್ಲ. ಇಬ್ಬರ ನಡುವೆ ಬಿಗುಮಾನ ಇರುತ್ತಿತ್ತು. ಆದರೆ ಈಗ ಇಬ್ಬರ ನಡುವೆ ಸಲಿಗೆ ಜಾಸ್ತಿಯಾಗಿದೆ. ಈಗ ‘ಹಾಯ್ ಪಾಪ್ಸ್’ ಎಂದು ಮಗ ತಂದೆಯ ಹೆಗಲ ಮೇಲೆ ಕೈ ಹಾಕುವಷ್ಟು ಸಲಿಗೆ ಬೆಳೆದಿದೆ. ಮಕ್ಕಳು ತಪ್ಪು ಮಾಡಿದಾಗ ‘ಹೊಡೆಯುತ್ತೇನೆ’ ಎಂದು ಬೆದರಿಸುತ್ತೇವೆಯೇ ಹೊರತು ಮಕ್ಕಳ ಮೇಲೆ ಕೈ ಮಾಡುವುದು ತೀರ ಕಡಿಮೆಯಾಗಿದೆ. ಆದರೂ ಮಕ್ಕಳು ಅತೀ ತರಲೆ ಮಾಡಿದಾಗಲೋ, ಅಶಿಸ್ತು ತೋರಿ ತುಂಬಾ ಸತಾಯಿಸುವಾಗಲೆಲ್ಲಾ, ಇವರು ಆಗಿನ ಕಾಲಘಟ್ಟದ ‘ಅಪ್ಪನ ಯೂನಿವರ್ಸಿಟಿ’ಯಲ್ಲಿ ‘ದಂಡಂ ದಶಗುಣಂ’ ನಿಯಮದಡಿಯಲ್ಲಿ ಬೆಳೆದಿದ್ದರೆ ಹೀಗೆ ಆಡುತ್ತಿರಲಿಲ್ಲ ಎನಿಸುವುದಂತೂ ಸತ್ಯ.

ಪುಟ್ಟ ಮಕ್ಕಳನ್ನು ಪ್ರೀತಿ ಮಾತುಗಳಿಂದಲೇ ಗೆಲ್ಲಬೇಕು. ಅವರನ್ನು ಹೊಡೆದು ಹೆದರಿಸುವುದರಿಂದ ಆ ಮಕ್ಕಳ ಮುಗ್ಧ ಮನಸ್ಸಿಗೆ ಘಾಸಿಯುಂಟಾಗುತ್ತದೆ ಎಂಬುದು ಶಿಕ್ಷಣ ತಜ್ಞರ ಅಭಿಪ್ರಾಯ. ಒಬ್ಬ ಸೆಲೆಬ್ರಿಟಿಯಂತೂ ಟೀವಿಯಲ್ಲಿ ಸಂದರ್ಶನ ಕೊಡುತ್ತಾ ತನ್ನ ಮಕ್ಕಳನ್ನು ಈ ಮೂವತ್ತು ವರ್ಷಗಳಲ್ಲಿ ಹೊಡೆಯುವುದಿರಲಿ, ಧ್ವನಿ ಏರಿಸಿಯೂ ಕೂಡ ಮಾತನಾಡಿಲ್ಲ ಎಂದು ಬೊಗಳೆ ಬಿಡುತ್ತಿದ್ದ. ಐವತ್ತು ವರ್ಷದ ದಾಂಪತ್ಯದಲ್ಲಿ ಒಮ್ಮೆಯೂ ಮನಸ್ತಾಪವಾಗಲಿಲ್ಲ, ಪುಟ್ಟ ಜಗಳವಾಗಲೀ, ವಾಗ್ವಾದವಾಗಲೀ ನಡೆದಿಲ್ಲ ಎಂದು ‘ಆದರ್ಶ ದಂಪತಿ ಸ್ಪರ್ಧೆ’ಯಲ್ಲಿ ಬಿಡುವ ರೈಲಿನಂತೆಯೇ ಇದೂ ಕೂಡ. ಮಗು ಹುಟ್ಟಿದಾಗಿನಿಂದ ಮೂವತ್ತು ವರ್ಷಗಳವರೆಗೆ ಒಮ್ಮೆಯೂ ಧ್ವನಿ ಏರಿಸಿಯೂ ಮಾತನಾಡಿಲ್ಲ ಎಂದರೆ ಆತ ನಿಜವಾಗಿ ಮಗುವನ್ನು ಸಾಕಿರಲಾರ. ಮಗುವಿಗೆ ಬೆಳಿಗ್ಗೆ ಹಾಸಿಗೆಯಿಂದ ಎಬ್ಬಿಸಿ, ಹಲ್ಲುಜ್ಜಿಸಿ, ಸ್ನಾನ ಮಾಡಿಸಿ, ತಿಂಡಿ ತಿನ್ನಿಸಿ, ಹೋಮ್‌ವರ್ಕ್ ಮಾಡಿಸಿ, ಸ್ಕೂಲಿಗೆ ಬಿಟ್ಟು, ಕರೆದುಕೊಂಡು ಬಂದು ಮಲಗಿಸುವರೆಗೆ ಒಮ್ಮೆಯೂ ಗದರಿಲ್ಲವೆಂದರೆ ಆತ ನಿಜಕ್ಕೂ ಯೋಗಿಯಾಗಿರಬೇಕು ಇಲ್ಲ ದೈವಾಂಶಸಂಭೂತನಾಗಿರಬೇಕು. ಇದೆಲ್ಲಾ ಭಾಷಣ ಹೊಡೆಯಲು ಚೆನ್ನಾಗಿರುತ್ತದೆ. ಆದರೆ ವಾಸ್ತವದಲ್ಲಿ ಪಾಲಿಸುವುದು ಅಸಾಧ್ಯ ಎಂಬುದು ನಿತ್ಯ ಮಕ್ಕಳನ್ನು ಸಂಭಾಳಿಸುವವರ ಅನುಭವ. ಹಾಗಾದರೆ, ತಪ್ಪುದಾರಿ ತುಳಿಯುವ, ಅಶಿಸ್ತು, ಅವಿಧೇಯತೆಯನ್ನು ತೋರುವ ಮಕ್ಕಳನ್ನು ಹೊಡೆದು ದಾರಿಗೆ ತರಬೇಕೋ? ಅಥವಾ ಪ್ರೀತಿಯ ಬುದ್ಧಿಮಾತುಗಳಿಂದ ದಾರಿಗೆ ತರಬೇಕೋ? ಎಂಬುದರ ಬಗ್ಗೆ ಜಿಜ್ಞಾಸೆ, ಗೊಂದಲಗಳು ಈಗಲೂ ಮುಂದುವರೆದಿವೆ. ಇದಕ್ಕೆ ಉತ್ತರವಾಗಿ ಈ ಸಂದರ್ಭಕ್ಕೆ ಹೊಂದುವಂತಹ ಕಥೆಯೊಂದಿದೆ:

ಒಂದು ಊರಿಗೆ ಹೋಗುವ ದಾರಿಯ ಪಕ್ಕದ ಒಂದು ಮರದ ಬಳಿ ಒಂದು ವಿಷಸರ್ಪ ವಾಸಿಸುತ್ತಿರುತ್ತದೆ. ಆ ದಾರಿಯಲ್ಲಿ ಬರುವವರನ್ನೆಲ್ಲಾ ಕಚ್ಚುತ್ತಾ, ಬಹಳ ಕುಖ್ಯಾತಿ ಪಡೆದಿರುತ್ತದೆ. ಆ ದಾರಿಯಲ್ಲಿ ಬರುವುದಕ್ಕೆ ಎಲ್ಲರೂ ಹೆದರಿಕೊಳ್ಳುತ್ತಿರುತ್ತಾರೆ. ಒಮ್ಮೆ ಅದೇ ದಾರಿಯಲ್ಲಿ ಬಂದ ಒಬ್ಬ ಋಷಿಯು ಹೀಗೆ ಮಾಡುವುದು ತಪ್ಪು ಎಂದು ವಿಷ ಸರ್ಪಕ್ಕೆ ಬುದ್ಧಿಮಾತು ಹೇಳುತ್ತಾನೆ. ಆ ಬುದ್ಧಿಮಾತನ್ನು ಕೇಳಿ ಮನ ಪರಿವರ್ತನೆಗೊಂಡ ಸರ್ಪವು ಜನರನ್ನು ಕಚ್ಚುವುದನ್ನು ಬಿಟ್ಟು ಬಿಡುತ್ತದೆ. ಕ್ರಮೇಣ ಎಲ್ಲರಿಗೂ ಆ ವಿಷಯ ಗೊತ್ತಾಗಿ, ಆ ಸರ್ಪದ ಬಗ್ಗೆ ಭಯ ಇಲ್ಲವಾಗಿ, ದಾರಿಹೋಕರೆಲ್ಲಾ ಆ ಸರ್ಪಕ್ಕೆ ಕಲ್ಲು ಎಸೆಯುತ್ತಾರೆ. ಆ ಸರ್ಪಕ್ಕೆ ಮೈತುಂಬಾ ಗಾಯಗಳಾಗಿ ಸ್ವಲ್ಪ ದಿನದಲ್ಲೇ ಗುರುತು ಸಿಗಲಾರದಷ್ಟು ಬದಲಾಗಿರುತ್ತದೆ. ಸ್ವಲ್ಪ ದಿನಗಳ ನಂತರ ಅದೇ ದಾರಿಯಲ್ಲಿ ಬಂದ ಆ ಋಷಿಯು ಸರ್ಪವನ್ನು ನೋಡಿ, ಅದರ ಸ್ಥಿತಿಯನ್ನು ಕಂಡು, ಮಮ್ಮಲ ಮರುಗುತ್ತಾ, ‘ನೀನು ಯಾರನ್ನೂ ಕಚ್ಚಬೇಡ ಎಂದು ಹೇಳಿದ್ದೆನೇ ಹೊರತು, ಬುಸ್ ಎಂದು ಹೆಡೆ ಎತ್ತಿ ಹೆದರಿಸಬೇಡ ಎಂದು ಹೇಳಿರಲಿಲ್ಲವಲ್ಲ? ಹಾಗೆ ಹೆದರಿಸಿದ್ದರೆ ನಿನಗೆ ಈ ದಿನ ಈ ದುಸ್ಥಿತಿ ಬರುತ್ತಿರಲಿಲ್ಲ’ ಎಂದು ಬುದ್ಧಿ ಹೇಳುತ್ತಾನೆ. ಅದೇ ರೀತಿ ಪೋಷಕರೂ ಕೂಡ ಶಿಕ್ಷೆಯನ್ನು ಕೊಡದೆ, ಬರಿ ಗದರಿಕೆಯ ಮೂಲಕವೇ ಕೆಲವು ಗುಣಗಳನ್ನು ಮಕ್ಕಳಲ್ಲಿ ತುಂಬಬಹುದು ಎಂಬುದು ಕೆಲವರ ಅಭಿಪ್ರಾಯ. ಶಿಕ್ಷೆಯನ್ನಾಗಲೀ ಸಲಿಗೆಯನ್ನಾಗಲೀ ಅತಿಯಾಗಿಸದೆ, ಎರಡರ ನಡುವೆ ಸಮತೋಲನ ಕಾಪಾಡಿಕೊಳ್ಳುವುದು ಅವಶ್ಯಕ ಎಂಬುದು ಅನುಭವಿಗಳ ಅಭಿಪ್ರಾಯ.

ಅತೀ ಅಪರೂಪಕ್ಕೊಮ್ಮೆ, ಪರಿಸ್ಥಿತಿ ಸುಧಾರಿಸುತ್ತಿಲ್ಲವೆಂದರೆ ಮಾತ್ರ ಶಿಕ್ಷೆಯ ಅವಶ್ಯಕತೆಯಿರುತ್ತದೆಯೇ ಹೊರತು, ಬಹಳಷ್ಟು ಬಾರಿ ಬಾಯಿಮಾತಿನ ಹೆದರಿಕೆಯಲ್ಲಿಯೇ ಮಕ್ಕಳನ್ನು ಸರಿದಾರಿಗೆ ತರಬಹುದು. ಮಕ್ಕಳು ಕೆಟ್ಟ ನಡವಳಿಕೆ ತೋರಿದರೆ ಅವರಿಗೆ ಸಿಗಬಹುದಾದ ಕೆಲವು ಸವಲತ್ತುಗಳನ್ನು, ಉದಾಹರಣೆಗೆ ಚಾಕೊಲೇಟ್, ಐಸ್‌ಕ್ರೀಂ, ಹೊರಗೆ ಪಿಕ್ನಿಕ್ ಕರೆದುಕೊಂಡು ಹೋಗುವುದು, ಟೀವಿ ನೋಡುವ ಅವಕಾಶ ಇತ್ಯಾದಿಗಳನ್ನು ತಡೆಹಿಡಿಯಬಹುದು ಮತ್ತು ಒಳ್ಳೆಯ ನಡತೆಗೆ ತಕ್ಕ ಬಹುಮಾನ ನೀಡಿ ಪ್ರೋತ್ಸಾಹಿಸುವ ಪದ್ಧತಿಯಿಂದಲೂ ಮಕ್ಕಳನ್ನು ತಿದ್ದಬಹುದು. ಬಹಳಷ್ಟು ಬಾರಿ ಪೋಷಕರು ಹೊರಗಿನ ಒತ್ತಡಗಳಿಂದಾದ ಕೋಪ, ನಿರಾಸೆಯನ್ನು ಮನೆಯಲ್ಲಿ ಮಕ್ಕಳ ಮೇಲೆ ತೋರುತ್ತಾರೆ. ಮಕ್ಕಳನ್ನು ಬೆಳೆಸಲು ಮುಖ್ಯವಾಗಿ ಬೇಕಿರುವುದು ತಾಳ್ಮೆ ಮತ್ತು ಪ್ರೀತಿ. ‘ದಂಡಂ ದಶಗುಣಂ ಭವೇತ್’ ಎಂಬುದು ಹಳೆಯ ನಾಣ್ಣುಡಿ, ‘ಏಟಿಗೆ ಬಗ್ಗದವರು ಪ್ರೀತಿಗೆ ಕೆಲವೊಮ್ಮೆ ಮಾತಿನ ಪೆಟ್ಟಿಗೆ ಬಗ್ಗುವರು’ ಎಂಬುದು ಪ್ರಸ್ತುತ ಕಾಲಕ್ಕೆ ಸರಿಹೊಂದುವಂತಹ ನಾಣ್ಣುಡಿಯಾಗಿದೆ. ಇದನ್ನು ಸಕಲ ಪೋಷಕರೂ ಅರಿತರೆ, ಮಕ್ಕಳ ಭವಿಷ್ಯ ಉಜ್ವಲವಾಗುತ್ತದೆ.

ಪ್ರತಿಕ್ರಿಯಿಸಿ: **feedback@sudha.co.in**